**ಸಾಕ್ಷಿಯನ್ನು ದಿನಾಂಕಃ 18-03-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ**

ಶಾರದಮ್ಮ ಮತ್ತು ಮನ್ಮಥ ಪಂಡಿತ ಇವರು ದಾವಾ ಅಸ್ತಿಯನ್ನು ಖರೀದಿ ಮಾಡಿದ್ದರು. ದಾವಾ ಅಸ್ತಿಯನ್ನು ಅವರು ಯಾವತ್ತೂ ಖರೀದಿ ಮಾಡಿರಲಿಲ್ಲ ಬದಲಾಗಿ ದರ್ಮಪ್ಪ ಇವರು ಖರೀದಿ ಮಾಡಿದ್ದರು ಅಂದರೆ ಸರಿಯಲ್ಲ, ನಾನು ಹೊಲಕ್ಕೆ ಸಂಬಂದಿಸಿದ ದಾಖಲೆನೋಡಿದ್ದೇನೆ, ಯಾವ ದಾಖಲೆ ಎಂದು ನನಗೆ ಹೇಳಲಾಗುವುದಿಲ್ಲ. ದರ್ಮಪ್ಪನಿಗೆ ಅಜೀತ್, ಜೋತಿರ್ಮಾಲಾ, ಸವಣಪ್ಪ, ಚಂಪಾವತಿ, ವರ್ದಮಾನ್, ಕಲಾವತಿ, ಲಕ್ಷ್ಮೀ, ಚಂದ್ರಪ್ರಭ, ಮನ್ಮಥ ಮತ್ತು ಪದ್ಮಾವತಿ ಎಂಬ ಮಕ್ಕಳು ಅಂದರೆ ಸರಿ. ಸಾಕ್ಷಿ ಮುಂದುವರೆದು ಅದರಲ್ಲಿ ಮುಂಚಿನ ಹೆಂಡತಿ ಮಕ್ಕಳು ಕೂಡ ಇರುವರು. ನನಗೆ ಮೊದಲನೇ ಹೆಂಡತಿಯ ಮಕ್ಕಳ ಹೆಸರು ಗೊತ್ತಿರುವುದಿಲ್ಲ. ನನಗೆ ಮೊದಲನೇ ಹೆಂಡತಿಯ ಹೆಸರು ಗೊತ್ತಿರುವುದಿಲ್ಲ.

2. ದರ್ಮಪ್ಪನಿಗೆ ಮೊದಲನೇ ಹೆಂಡತಿ ಇದ್ದು ಆಕೆಗೆ ಮಕ್ಕಳು ಇದ್ದರು ಎಂದು ನಾನು ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ. ಆ ವಿಚಾರವನ್ನು ಹೊಸದಾಗಿ ಸೃಷ್ಟಿಸಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದರ್ಮಪ್ಪ ಮೃತ ಪಟ್ಟ ನಂತರ ಆತನ 10 ಜನ ಮಕ್ಕಳು ಜಂಟಿಯಾಗಿ ದಾವಾ ಸ್ವತ್ತನ್ನು ಸಾಗುವಳಿ ಮಾಡುತಿದ್ದರು ಅಂದರೆ ಸರಿಯಲ್ಲ. ಈಗಲೂ ಅವರೇ ಅದನ್ನು ಸಾಗುವಳಿ

ಮಾಡುವರು ಅಂದರೆ ಸರಿಯಲ್ಲ. ಖರೀದಿ ಮಾಡಿದ ಮಂಜುನಾಥನು ನನ್ನ ತಮ್ಮನ ಮಗ ಇರುವನು.

3. ನನಗೆ ದಾವಾ ಅಸ್ತಿಯ ಕುರಿತು ಯಾವುದೇ ಮಾಹಿತಿ ಇರುವುದಿಲ್ಲ ಅಂದರೆ ಸರಿಯಲ್ಲ. ವಿಶ್ವಾಸದ ನೆಲೆಯಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಮತ್ತು 1ನೇ ಪ್ರತಿವಾದಿ ಸೇರಿಕೊಂಡು ಮಂಜುನಾಥ ಹೆಸರಿನಲ್ಲಿ ಕ್ರಯ ಪತ್ರ ಸೃಷ್ಟಿಸಿದ್ದೇವೆ ಅಂದರೆ ಸರಿಯಲ್ಲ. ಕ್ರಯದ ವ್ಯವಹಾರ ನನ್ನ ಸಮಕ್ಷಮ ನಡೆದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದರ್ಮಪ್ಪನ ಮಕ್ಕಳ ಹಕ್ಕನ್ನು ನಾಶ ಪಡಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

18-03-2026

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 18.03.2026